ದಿನಾಂಕಃ 13-10-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ ಎನ್ ಆರ್ ವಾದಿ ಪರ ವಕೀಲರಿಂದಃ</u> ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ ಮತ್ತು ತಿಳಿದುಕೊಂಡಿದ್ದೇನೆ. ನಾನು ಈ ದಾವೆಯಲ್ಲಿ ಸೇರ್ಪಡೆಗೊಳ್ಳುವ ಮೊದಲು ಈ ದಾವೆಯ ಬಗ್ಗೆ ಗೊತ್ತಿತ್ತು. ನಾನು ದಿನಾಂಕಃ 29.10.2003 ರಂದು ಹರಪನಹಳ್ಳಿ ತಹಶೀಲ್ದಾರವರಿಗೆ ಸರ್ವೆ ನಂಬರ 272 ರ 12.08 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಅರ್ಜಿ ನೀಡಿದ್ದೆನು ಅಂದರೆ ಸರಿ. ಸದರಿ ಅರ್ಜಿಯೊಂದಿಗೆ ಒಂದು ವಂಶವೃಕ್ಷ ದಾಖಲೆಯನ್ನು ಹಾಜರು ಪಡಿಸಿದ್ದೆನು ಅಂದರೆ ಸರಿ. 2018 ರಲ್ಲಿ ನಾನು ಚಿಗಟೇರಿ ಉಪತಹಶೀಲ್ದಾರವರ ಕಛೇರಿಯಿಂದ ನಾನು ಒಂದು ವಂಶವೃಕ್ಷ ಪಡೆದಿದ್ದೆನು ಅಂದರೆ ಸರಿ. 2019 ರಲ್ಲಿಯೂ ಅದೇ ಕಛೇರಿಯಿಂದ ಇನ್ನೊಂದು ವಂಶವೃಕ್ಷ ಪಡೆದಿರುತ್ತೇನೆ ಅಂದರೆ ಸರಿ.

2. ಚೆನ್ನಬಸಪ್ಪ, ಅಶೋಕ, ವಿರೇಶಿ ಮತ್ತು ಮಹೇಶಪ್ಪ ಇವರು ನನ್ನ ಮಕ್ಕಳು. ನನ್ನ ತಂಗಿಯ ಹೆಸರು ಗಂಗಮ್ಮ. ಆಕೆ ವಿಧ್ಯಾಭ್ಯಾಸ ಮಾಡಿಲ್ಲ. ಜೋಳದ ಕೂಡ್ಲಿಗಿ ಸಿದ್ದಪ್ಪನ ಪತ್ನಿ ದೇವಕ್ಕ ಅಂದರೆ ನನ್ನ ಪತ್ನಿ, ನೀಲವಂಜಿ ಗ್ರಾಮದ ಮನೆ ಸಂಖ್ಯೆ 154/ಎ ನಿಪಿ 44 ರಂತೆ ನನ್ನ ಪತ್ನಿಗೆ ಮರಣ ಶಾಸನದ ಮೂಲಕ ಬಂದಿದೆ ಅಂದರೆ ಸರಿ. ನಾನು, ನನ್ನ ಪತ್ನಿ ಮತ್ತು ಮಕ್ಕಳು ಇದೇ ಮನೆಯಲ್ಲಿ ವಾಸಿಸುತ್ತಿದ್ದೇವೆ ಅಂದರೆ ಸರಿ. ಹೆಚ್ ಬಸಪ್ಪ ಅನ್ನುವವರು ಈ ಆಸ್ತಿಗೆ ತನ್ನ ಸೊಸೆಯ ಹೆಸರಿನಲ್ಲಿ ಮರಣ ಶಾಸನ ಮಾಡಿರುತ್ತಾರೆ ಅಂದರೆ ಸರಿ. ಮಹೇಶಪ್ಪ ಅನ್ನುವವರು ನನ್ನ ಮತ್ತು ನನ್ನ ಕುಟುಂಬದವರ ವಿರುದ್ಧ ಹರಪನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 37/2011 ನ್ನು ದಾಖಲಿಸಿದ್ದರು ಅಂದರೆ ಸರಿ. ಸದರಿ ದಾವೆಯನ್ನು ಸರ್ವೆ ನಂಬರ 272 ಮತ್ತು ಮನೆ ಸಂಖ್ಯೆ 154/ಎ ಮತ್ತು 154/ಬಿ ಇವುಗಳ ಮೇಲೆ ದಾಖಲಿಸಿದ್ದರು ಅಂದರೆ ಸರಿ. ಆ ದಾವೆಯಲ್ಲಿ ನನ್ನ ಮತ್ತು ಅವರ ಮಗಳು 12.08 ಎಕರೆ ಆಸ್ತಿಯ ಮಾಲೀಕರು ಎಂದು ತೀರ್ಮಾನವಾಗಿರುತ್ತದೆ

ಅಂದರೆ ಸರಿ. ಸದರಿ ತೀರ್ಪಿನ ವಿರುದ್ಧ ನಾನು ದಾವಣಗೆರೆ ಜಿಲ್ಲಾ ನ್ಯಾಯಾಲಯದಲ್ಲಿ ಆರ್ ಎ 122/2015 ರಂತೆ ಮೇಲ್ಮನವಿ ಸಲ್ಲಿಸಿದ್ದೆನು ಅಂದರೆ ಸರಿ. ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಅಂದರೆ ಸರಿ.

3. ವಾದಿ ಮತ್ತು ಪ್ರತಿವಾದಿ 1 ರಿಂದ 19 ರವರ ಕುಟಂಬದವರ ಮೂಲ ಪುರುಷ ಸಿದ್ದಲಿಂಗಪ್ಪನ ಮಗ ಚೆನ್ನಬಸಪ್ಪ. ಸಿದ್ದಲಿಂಗಪ್ಪನಿಗೆ ಮೂವರು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು. ಅವರುಗಳು ಚೆನ್ನಬಸಪ್ಪ, ಚಂದ್ರಪ್ಪ, ಶಂಕ್ರಪ್ಪ , ಚೆನ್ನಬಸಮ್ಮ ಗುರುಸಿದ್ದಮ್ಮ ಮತ್ತು ಶಿವಕ್ಕ. ಈ ದಾವೆಯಲ್ಲಿ ಸೇರಿಸಿರುವ ಆಸ್ತಿಗಳ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ. ಮನೆಗಳ ಸಂಖ್ಯೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ಜೋಳದ ಕೂಡ್ಲಿಗಿ ಗ್ರಾಮಕ್ಕೆ ಸೇರಿರುತ್ತವೆ. ದಾವಾ ಆಸ್ತಿಗಳ ವಿಸ್ತೀರ್ಣ ಗೊತ್ತಿಲ್ಲ, ಆದರೆ ನನ್ನ ತಂದೆಗೆ 5 ಎಕರೆ ಇರುತ್ತದೆ. ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಗಳ ಸರ್ವೆ ನಂಬರ ಹೇಳಲು ಆಗುವುದಿಲ್ಲ. ನನ್ನ ತಂದೆಯ ಉಳಿದ 5 ಜನ ಮಕ್ಕಳಿಗೆ ಯಾವುದೇ ಆಸ್ತಿ ಬಂದಿರುವುದಿಲ್ಲ, ಆದರೆ ನನ್ನ ಚಿಕ್ಕಪ್ಪ ಚಂದ್ರಪ್ಪನ ಪತ್ನಿ ಪಾರ್ವತಮ್ಮನವರಿಗೆ 5 ಎಕರೆ ಬಂದಿರುತ್ತದೆ. ಯಾವಾಗ ಭಾಗ ಆಗಿರುತ್ತದೆ ಅನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಇಲ್ಲಿಯವರೆಗೂ ಸಿದ್ದಲಿಂಗಪ್ಪನ ಮಕ್ಕಳ ನಡುವೆ ವಿಭಾಗವಾಗಿಲ್ಲ ಅಂದರೆ ಸರಿಯಲ್ಲ. ಸಿದ್ದಲಿಂಗಪ್ಪನಿಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಸಿದ್ದಲಿಂಗಪ್ಪ ತೀರಿಕೊಂಡ ನಂತರ ಆಸ್ತಿಗಳನ್ನು ನನ್ನ ತಂದೆ ಉಳುಮೆ ಮಾಡುತ್ತಿದ್ದರು.

4. ಮೂಲ ವಾದಿಯು 1946 ರಲ್ಲಿ ಜನಿಸಿರುತ್ತಾರೆ ಅಂದರೆ ಸರಿ. ಜೋಳದ ಕೂಡ್ಲಿಗಿ ಚೆನ್ನಬಸಪ್ಪ ಇವರನ್ನು ನೋಡಿರುತ್ತೇನೆ. ಯಾವ ವರ್ಷದಲ್ಲಿ ನೋಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ನನಗೆ ಈಗ ಸುಮಾರು 70 ವರ್ಷ ಆಗಿರುತ್ತದೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ನನ್ನ ವಯಸ್ಸು ಸುಮಾರು ಐದೈದು ವರ್ಷ ವ್ಯತ್ಯಾಸ ಇರುತ್ತದೆ ಅಂದರೆ ಗೊತ್ತಿಲ್ಲ, ನನಗೆ 70 ವರ್ಷ ಆಗಿರುತ್ತದೆ. ಗಂಗಮ್ಮ ನನಗಿಂತ

ಡಿಡಬ್ಲ್ಯೂ-2
ಓ ಎಸ್ 42/2014

ಚಿಕ್ಕವರು. ಅವರು ದಿನಾಂಕಃ 01.06.1955 ರಲ್ಲಿ ಜನಿಸಿರುತ್ತಾರೆ ಅಂದರೆ ಗೊತ್ತಿಲ್ಲ, ಆದರೆ ನನಗಿಂತ ಚಿಕ್ಕವರು. ನಿಡಿ 10 ರ ಪ್ರಕಾರ ನನ್ನ ಜನ್ನ ದಿನಾಂಕಃ 01.08.1955 ಆಗಿರುತ್ತದೆ ಅಂದರೆ ಅಂದಾಜು ಇರಬಹುದು. ನಾನು ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ಗಂಗಮ್ಮ ನನಗಿಂತ 2 ತಿಂಗಳು ದೊಡ್ಡವರು ಅಂದರೆ ಸರಿಯಲ್ಲ.

5. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನಿಗೆ ತಲಾ 5 ಎಕರೆ ವಿಭಾಗದಲ್ಲಿ ಬಂದ ಬಗ್ಗೆ ಕಂದಾಯ ದಾಖಲೆಗಳನ್ನು ಮಾಡಿಸಿಕೊಳ್ಳಲು ಅರ್ಜಿ ನೀಡಿರುವುದಿಲ್ಲ. ಜೋಳದ ಕೂಡ್ಲಿಗಿ ಚೆನ್ನಬಸಪ್ಪನಿಗೆ ವಾದಿ ಮಹೇಶಪ್ಪ ಒಬ್ಬರೆ ಮಗ ಅಂದರೆ ಸರಿಯಲ್ಲ, ಮಹೇಶಪ್ಪ, ನಾನು ಮತ್ತು ನನ್ನ ತಂಗಿ ಗಂಗಮ್ಮ ಒಟ್ಟು ಮೂವರು ಮಕ್ಕಳು. ನಾನು ಮತ್ತು ಗಂಗಮ್ಮ ಚೆನ್ನಬಸಪ್ಪನ ಮಕ್ಕಳಲ್ಲ ಅಂದರೆ ಸರಿಯಲ್ಲ. ಜೋಳದ ಕೂಡ್ಲಿಗಿ ಚೆನ್ನಬಸಪ್ಪ ಯಾವಾಗ ತೀರಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಅವರು 1950 ರಲ್ಲಿ ತೀರಿಕೊಂಡಿರುತ್ತಾರೆ ಅಂದರೆ ಇರಬಹುದು, ನಾನು ಹುಟ್ಟಿದ ನಂತರ ತೀರಿಕೊಂಡಿರುತ್ತಾರೆ. ನಿಲವಂಜಿ ಗ್ರಾಮದ ಆಸ್ತಿಗಳಿಗೆ ಸಂಬಂಧಪಟ್ಟತೆ ಆಸ್ತಿಗಳನ್ನು ನಾನು ಮತ್ತು ಮಹೇಶಪ್ಪ 1982-1983 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ. ಒಂದು ಮನೆಯಲ್ಲಿ 2 ಭಾಗ ಮಾಡಿಕೊಂಡಿರುತ್ತೇವೆ. 12.08 ಎಕರೆ ಆಸ್ತಿಯನ್ನು ನನ್ನ ಮಕ್ಕಳು ಹೆಸರಿಗೆ ಮಾಡಿಕೊಳ್ಳಲಾಗಿದ್ದು, 6.63 ಎಕರೆ ಮಹೇಶಪ್ಪನ ಹೆಸರಿಗೆ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.